ಟುರ್ ಟುರ್ ಅಂತ ಪ್ರೀತಿ ತೋರಿಸುತ್ತ ಬಂತು. ಅದನ್ನು ಎತ್ತಿಕೊಂಡು ಸೀದಾ ಕೆಳಗೆ ಹೊರಟಳು. ಎದುರಾದ ಕೆಲಸದ ಹೆಂಗಸು ವನಜಮ್ಮ, 'ಬೆಕ್ಕನ್ನು ಹಿಡ್ಕೊಂಡು ಎಲ್ಲಿಗೆ ಹೊರಟ್ರೀ?' ಅಂತ ಕೇಳಿದಳು. 'ಅದನ್ನು ಎಲ್ಲಿಗಾದ್ರೂ ಬಿಟ್ಟು ಬರ್ತೇನೆ ವನಜಮ್ಮ' ಅಂದಳು. 'ಅಬ್ಬ, ಇವತ್ತಿಗಾದ್ರೂ ಅದರಿಂದ ನಿಮ್ಮ ಮನೆಗೆ ಮುಕ್ತಿ ಆಗ್ತದೆ ಅಲ್ವಾ, ಅಷ್ಟೇ ಸಾಕು. ಅದು ಯಾರ ಮನೆ ಹೊಕ್ಕದಾ ಅವರ ಮನೆಯಲ್ಲಿ ಒಂದೇ ವಾರಕ್ಕೆ ಯೆಂತದಾದ್ರೂ ಕೆಟ್ಟದ್ದು ಆಗ್ತದೆ. ದರಿದ್ರ ಬೆಕ್ಕು' ಅಂತ ಬೈತಾ ಹೋದ್ಲು. ಅಷ್ಟು ಕೇಳಿದ ಮೇಲೆ ಸ್ಮಿತಾಳಿಗೆ ತಾನು ಹಾಕಿದ ಐಡಿಯಾ ಯಶಸ್ವಿ ಆದ ಹಾಗೆ ಅಂತ ಎಣಿಸಿದ್ಲು. ಪರಾಶರನ್ ಅವರನ್ನು ಕಂಡು ಬಿಸಿಬೇಳೆಬಾತನ್ನು ಕೊಟ್ಟು, 'ಅಂಕಲ್, ಈ ಬೆಕ್ಕನ್ನು ಸ್ವಲ್ಪ ದಿನ ನಿಮ್ಮ ಮನೆಯಲ್ಲಿ ಬಿಟ್ಟಿರ್ತೇನೆ. ನಾನು ಆಗಾಗ ಬಂದು ನೋಡಿ ಹೋಗ್ತಾ ಇರ್ತೇನೆ. ನಮ್ಮ ಮನೆಯಲ್ಲಿ ಇವ್ರು ಪೂರ್ತಿ ಹುಷಾರಾಗುವ ವರೆಗೆ ಇಟ್ಟುಕೊಳ್ತೀರಾ ಪ್ಲೀಸ್?' ಅಂತ ಕೇಳಿದ್ದಳು. ಅವರು ಒಪ್ಪಿದ್ದರು.

ವಾಪಸು ಬರುವಾಗ ಇನ್ನು ಒಂದೇ ವಾರ ಆ ಮುದುಕ ಗೊಟಕ್ ಅನ್ನಬಹುದು. ನನ್ನ ಮನೆಯ ಅನಿಷ್ಟವನ್ನು ಅಲ್ಲಿ ಬಿಟ್ಟು ಬಂದಿದ್ದೇನೆ ಅಂತ ಒಳಗೊಳಗೇ ಅಂದುಕೊಳ್ಳುತ್ತಿದ್ದಳು. ವಿಷ್ಣುಮೂರ್ತಿ ಬೆಕ್ಕಿನ ಬಗ್ಗೆ ಕೇಳಿದಾಗ, 'ಪರಾಶರನ್ ಅವರ ಮನೆಯಲ್ಲಿ ಒಂದು ವಾರದ ಮಟ್ಟಿಗೆ ಬಿಟ್ಟು ಬಂದಿದ್ದೇನೆ' ಅಂದಿದ್ದಳು. ಅಂತೂ ಎಲ್ಲೂ ಹೋಗ್ಲಿಲ್ಲ ಅಲ್ವಾ ಅಂತ ಅವ ಸಮಾಧಾನ ಪಟ್ಟುಕೊಂಡಿದ್ದ.

ಒಂದು ವಾರ ಪ್ರತೀದಿನ ಅವಳು ಪರಾಶರನ್ ಮನೆಗೆ ಹೋಗಿ ಬರ್ತಾ ಇದ್ದಳು. ಅವಳು ಎಣಿಸಿದಂತೆ ಆಗ್ಲೇ ಇಲ್ಲ. ಅವರು ದಿನ ದಿನ ಹುಷಾರಾಗ್ತಾ ಬಂದ್ರು. ಅವತ್ತು ಮೂರ್ತಿ ಹೆಂಡತಿಯನ್ನು ಕರೆದು, 'ಆ ಬೆಕ್ಕನ್ನು ವಾಪಸ್ ತೆಕ್ಕೊಂಡು ಬಾ. ಹೇಗೂ ನಿಂಗೆ ಅದನ್ನು ಕಂಡ್ರೆ ಆಗೂದಿಲ್ಲ ಅಲ್ವಾ. ನಾನೇ ಅದನ್ನು ಹೊರಗೆ ಎಲ್ಲಿಯಾದ್ರೂ ಬಿಟ್ಟು ಬರ್ತೇನೆ.' ಅಂದಿದ್ದ. ಸ್ಮಿತಾಳಿಗೆ ಒಂದು ಕಡೆಯಲ್ಲಿ ಮುದುಕನಿಗೆ ಎಂತ ಸಾ ಆಗ್ಲಿಲ್ಲ ಅಲ್ವಾ ಅಂತ ನಿರಾಸೆ. ಮತ್ತೊಂದು ಕಡೆಯಲ್ಲಿ ಈ ಅನಿಷ್ಟ ಮನೆಯಿಂದ ಹೊರಗೆ ಹೋಗ್ತದೆ ಅಂತ ಸಂತೋಷ. ಪರಾಶರನ್ ಮನೆಗೆ ಬಂದಳು. ವಿಷಯ ಕೇಳಿದ ಅವರು, 'ನಡಿಯಮ್ಮ ನಾನೂ ಬರ್ತೇನೆ ನಿಮ್ಮ ಮನೆಗೆ. ಆಸ್ಪತ್ರೆಯಿಂದ ಬಂದ ನಂತ್ರ ಮೂರ್ತಿಯನ್ನು ನೋಡ್ಲೇ ಇಲ್ಲ' ಅಂತ ಹೇಳ್ತಾ ಬೆಕ್ಕನ್ನು ಕೈಯಲ್ಲಿ ಹಿಡ್ಕೊಂಡು ಅವಳೊಟ್ಟಿಗೆ ಹೊರಟರು. ಲಿಫ್ಟ್‌ನಲ್ಲಿ ಕೆಳಗಿಳಿದು ಲಾನ್‌ನಲ್ಲಿ ನಡ್ಕೊಂಡು ಬರ್ತಾ ಇದ್ದ ಹಾಗೇ ಅದು ಛಂಗನೆ ಹಾರಿ ತಪ್ಪಿಸಿಕೊಂಡು ಓಡಿತು. 'ಅರೆರೆ ಓಡಿ ಹೋಯ್ತು' ಅಂದ್ರು ಪರಾಶರನ್. 'ಬಿಡಿ ಅಂಕಲ್ ಪೀಡೆ ತೊಲಗಿತು' ಅಂತ ನಿರಾಳವಾಗಿ ಹೇಳಿದಳು.

ಮನೆಗೆ ಬಂದು ನೋಡಿದರೆ ಬೆಡ್‌ರೂಮಿನಲ್ಲಿ ವಿಷ್ಣುಮೂರ್ತಿ ಅಂಗಾತ ಬಿದ್ದುಕೊಂಡಿದ್ದಾನೆ! ಬಾಯಿ ತೆರೆದು ಕುತ್ತಿಗೆ ಓರೆಯಾಗಿದೆ! 'ಅಂಕಲ್!!' ಅಂತ ಕಿರುಚಿದಳು. ಅವರು ಮೈ ಮುಟ್ಟಿದವರೇ. 'ಓ ದೇವರೇ' ಅಂದ್ರು.


**ಪಿ.ಬಿ. ಪ್ರಸನ್ನ**

ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರು. 'ಗಣಪ ಮತ್ತು ಗಾಂಪ', 'ಮಣ್ಣಿಂದ ಕಾಯ', 'ತನುವಿನೊಳಗೆ ಹುಸಿತುಂಬಿ' ಹಾಗೂ 'ಉರಗವೇಣಿಯರೆಲ್ಲ ಕೇಳಿ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಹಾಸ್ಯಪ್ರಬಂಧಗಳ ಸಂಕಲನ ಹಾಗೂ ಕವನ ಸಂಕಲನ ಪ್ರಕಟವಾಗಿದೆ.